ವಿ.ಎಸ್. ಹಿಂದೂಪುರ, ಬಳ್ಳಾರಿ

*ನಮಗೆ ಬೇಕೆನಿಸಿದಾಗ ಸಾವು ಬರುವಂತಿದ್ದರೆ ಏನಾಗಬಹುದು?*




ಶ್ಮಶಾನದೆದುರು ನಿಂತು 'ಮೈ ಲಾಸ್ಟ್ ಪೋಸ್ಟ್, ಡೈಯಿಂಗ್ ನೌ, ಗುಡ್ ಬೈ' ಎಂಬ ಸೆಲ್ಫಿ-ಮೆಸೇಜ್ ಅಪ್‌ಲೋಡ್ ಮಾಡಬಹುದು.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ಕಾಲು ಜಾರಿದರೆ ಗುಣ ಮಾಡಬಹುದು. ನಾಲಿಗೆ ಜಾರಿದರೆ...?*

ಒಮ್ಮೆ ಜಾರಿದರೆ ಕ್ಷಮೆ ಕೇಳಿ; ಪದೇ ಪದೇ ಜಾರುವುದಾದರೆ ಚುನಾವಣೆಗೆ ನಿಲ್ಲಿ.

ಅಮ್ಮವನ ವಸುಂಧರಾ ಲಕ್ಷ್ಮಣ, ಕುಶಾಲನಗರ

*ರವಿಕೆ ಹೊಲೆಯಲು 20/- ಇದ್ದಾಗಿನಿಂದ 200/- ಆದರೂ ನಿಮ್ಮ ಸಂಭಾವನೆ ಅಷ್ಟೇ ಇದೆಯಲ್ಲ?*

ಇಲ್ಲಿ ಬೆಲೆ ಇರುವುದು ಸಂಭಾವನೆಗಲ್ಲ, ಭಾವನೆಗೆ!

ಪ್ರಮೀಳಾ ಎಂ. ರಾವ್, ಬೆಂಗಳೂರು

*ಎಲ್ಲಾ ಅರಿತ ಆ ದೇವರನ್ನು ಏನೂ ಅರಿಯದ ಹಸುಳೆಗೆ ಹೋಲಿಸುವುದರ ಅರ್ಥ?*



ಸರ್ವಜ್ಞತೆಯಲ್ಲಾಗಲಿ, ಸರ್ವ ಅಜ್ಞತೆಯಲ್ಲಾಗಲಿ, ಪರಿಪೂರ್ಣತೆ ಇರುವುದೆಂದು.

ರತ್ನಾ ರಾಜ್‌ಕುಮಾರ್, ಹಾಸನ

*ಇಲ್ಲೊಬ್ಬ ಅಜ್ಜ ಭಲೇ ಭಲೇ ಮೋದಿ ಎಂದು ಯಾವಾಗಲೂ ಹೇಳಲು ಕಾರಣ?*

ನೋಟು ನಿಷೇಧದಿಂದ ಅಜ್ಜಿ ಬಚ್ಚಿಟ್ಟಿದ್ದ ಆಸ್ತಿಯಷ್ಟೂ ಬಯಲಾಯಿತಂತೆ.

ಸುಂದರ್, ಬೆಂಗಳೂರು

*ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರುಪಾಯಿ. ಇಬ್ಬರು ಇದ್ದರೆ?*

ಶೀಘ್ರದಲ್ಲೇ ಅವರಿಬ್ಬರಿಗೂ ತಲಾ(ಕ್) ಅರ್ಧಕೋಟಿ; ಇವನಿಗೆ ಪಾಪರ್ ಚೀಟಿ.

ತಲಕಾಡು ಶ್ರೀನಿಧಿ, ಬೆಂಗಳೂರು

*ಮನುಷ್ಯನಿಗೆ ಕಿವಿ, ಕಣ್ಣು ಒಂದೊಂದೇ ಕೊಟ್ಟು, ಮೂಗು, ಬಾಯಿ ಎರಡೆರಡು ಕೊಟ್ಟಿದ್ದರೆ ಹೇಗಿರುತ್ತಿತ್ತು ಸಾರ್?*

ನ್ಯೂಸ್ ಚಾನಲ್‌ಗಳ ಮೂಗು ತೂರಿಸುವಿಕೆ, ಕಿರಿಚಾಡುವಿಕೆ ಕಂಡೂ ಹೀಗೆ ಕೇಳಿದ ನಿಮ್ಮ ಧೈರ್ಯಕ್ಕೆ ಸಲಾಮ್.

ಸೃಜನ್ ಜೈನ್, ಹೂವಿನಹಡಗಲಿ

*ಕಾಲ್ ಸೆಂಟರ್ ಯುಗದಲ್ಲಿ ರಾಮ್ ಉತ್ತರ ಬೇಕಾ?*

ನೆಟ್ ನೀಡದ ಸೊಟ್ಟ ನೋಟವನ್ನು ಕಾಣಬಯಸುವ ಜನರಿಗೆ ಬೇಕಂತೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಕೆಲವು ಸ್ವಯಂ ಘೋಷಿತ ದೇವಮಾನವರು ಮಹಿಳೆಯರ ಮೈ ಮುಟ್ಟಿ ಆಶೀರ್ವಾದ ಮಾಡಲು ಕಾರಣವೇನು?*

ಆಗಾಗ್ಗೆ ಆತ್ಮನಿಗ್ರಹದ ಪರೀಕ್ಷೆ ಮಾಡಿಕೊಳ್ಳುವ ಚಟ!

ಎಂ.ಎ. ಕುಮಾರ್, ಬೆಂಗಳೂರು

*ಮದ್ಯ ಕುಡಿಯುವ ಮೊದಲು ಕೆಲವರು ಮೂರು ತೊಟ್ಟು ಕೆಳಗೆ ಹಾಕುತ್ತಾರಲ್ಲ, ಏಕೆ?*

ಮಡದಿ, ಮಕ್ಕಳು, ತನ್ನ ಭವಿಷ್ಯ ಮೂರನ್ನೂ ಕೆಳಮಟ್ಟಕ್ಕೆ ಹಾಕುತ್ತಿದ್ದೇನೆ ಎಂಬುದರ ಸಂಕೇತ.

ಫಾಲನೇತ್ರ ಸಜ್ಜನ, ಶಿರಸಿ

*ಸೀತೆ ಕರಾಟೆ ಕಲಿತಿದ್ದರೆ?*

ಪ್ರಯೋಜನವಾಗುತ್ತಿರಲಿಲ್ಲ. 9 ಗಜದ ಸೀರೆ ಉಟ್ಟು ಯಾ...ಹೂ... ಎಂದು ಹಾರುವುದು ಸಾಧ್ಯವಿಲ್ಲ.

ಮಾಲತಿ ರಾಜು, ಬೆಂಗಳೂರು

*ಕನ್ನಡದಲ್ಲಿ ವಯಸ್ಸು ನಡೆಯುತ್ತೆ, ಇಂಗ್ಲಿಷ್‌ನಲ್ಲಿ ಓಡುತ್ತೆ. ಯಾಕೆ?*

ವಯಸ್ಸಿನ ಲೆಕ್ಕದ, ದಿನದ ಲೆಕ್ಕ ತೋರುವ ಗಡಿಯಾರ, ಇಲ್ಲಿ ನಡೆದು, ಅಲ್ಲಿ ರನ್ ಆಗುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು

*ಘಟಿಂಗನ ಕೊನೆಯ ರೆಸಾರ್ಟ್ ಕಾರಾಗೃಹವೆ?*

ಅದು ಕೊನೆಯಿಂದ ಎರಡನೆಯದು; ಕೊನೆಯದು ಸಮುದ್ರತೀರದ ಪಕ್ಕದ ವಿಶ್ರಾಂತಿತಾಣ.

## ಬಹುಮಾನಿತ ಪ್ರಶ್ನೆ

ಬಿದರಹಳ್ಳಿ ಚನ್ನವೀರಪ್ಪ ಬಳ್ಳಾರಿ

*ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದಂತೆ, ಹೌದೆ?*

ಕಾಕದೃಷ್ಟಿಗೆ ಬೀಳದಿದ್ದರೆ ಮಾತ್ರ.

ಮಾಧುರಿ. ಮ. ನಾಯಿಕ, ಬೆಳಗಾವಿ

*ಸರ್ಕಾರಿ ಕನ್ನಡ ಶಾಲೆಗಳು 'ಹೌಸ್‌ಫುಲ್'ಎಂದು ಬೋರ್ಡ್ ಹಾಕುವುದು ಯಾವಾಗ ರಾಮ್‌ಜೀ?*

ನುರಿತ ಅಡಿಗೆಯವನು ಮೇಷ್ಟ್ರಾಗಿ ಬಂದಾಗ ಬಿಸಿಯೂಟದ ಲಂಚ್‌ಟೈಮ್‌ನಲ್ಲಿ.

ವಿ. ಹಮೀದ್, ವಿಟ್ಲ

*ಊರಿಗೆ ಬಂದಿದ್ದಾಳೆ. ಕೆರೆಪಕ್ಕ ಬರುವಳೆ?*

ಮೊದಲು ಕೆರೆಪಕ್ಕದಲ್ಲಿರುವ ಆ 'ಬಿವೇರ್ ಆಫ್ ಹಮೀದ್' ಬೋರ್ಡ್ ತೆಗೆಸಿದರೆ ಬರಬಹುದೇನೋ...

ಕುಮಾರ ಚಲವಾದಿ, ಹೊಳೆನರಸಿಪುರ

*ಮಂಗನಿಂದ ಮಾನವ ಎನ್ನುವುದನ್ನು ಹೇಗೆ ನಿರೂಪಿಸಬಲ್ಲಿರಿ?*



ಪಾರ್ಲಿಮೆಂಟಿನ ಲೈವ್ ಟೆಲಿಕಾಸ್ಟ್ ತೋರಿಸುವುದರ ಮೂಲಕ!

ಬಾ.ರಂ. ಸುರೇಶ್, ಶಿವಮೊಗ್ಗ

*ಮದುವೆ ವಿಧಿಬರಹ ಎನ್ನುವವರೂ ಜ್ಯೋತಿಷಿಗೆ ಜಾತಕ ತೋರಿಸಿ ಮದುವೆ ಮಾಡಿಕೊಳ್ಳುವುದು ಏಕೆ?*

ಎಡವಟ್ಟಾದಾಗ ಬಯ್ಯಲು ಒಂದು ವ್ಯಕ್ತಿ ಬೇಕಲ್ಲ.

ಎಂಬಿ, ಕೃಷ್ಣಮೂರ್ತಿ, ಚಾಮರಾಜನಗರ

ಕಷ್ಟದಲ್ಲಿರುವಾಗ ಗಂಡುಮಕ್ಕಳೇ ಇರಬೇಕು ಎನ್ನುವವರಿಗೆ ನಿಮ್ಮ ಸಲಹೆ?

ಚಿಂತೆ ಬೇಡ; ಈಗ ಹಣವಿತ್ತರೆ ಆಂಬುಲೆನ್ಸ್, ಸ್ಟ್ರೆಚರ್, ಅಪರಕರ್ಮದ ಕರ್ತೃ ಲಭ್ಯ. ಮಿಕ್ಕೆಲ್ಲಕ್ಕೆ ಹೆಣ್ಣೂ ಆದೀತು.

■ ರಾಮ್